**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ,**

**ರಾಣೇಬೆನ್ನೂರು.**

**Crl. Misc. No.261/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | – | ರೇಣುಕಾ ತುಕ್ಕಮ್ಮನವರ | ***PW-1*** |
| ಗಂಡನ ಹೆಸರು | – | ಪ್ರಭು | |
| ವಯಸ್ಸು | – | 26 ವರ್ಷ | |
| ಉದ್ಯೋಗ | – | ಮನೆಗೆಲಸ | |
| ವಾಸ | – | ಹರಿಹರ | |

**ದಿನಾಂಕಃ 04-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಾದ ಶ್ರೀಮತಿ ಕೆ.ಜೆ.ಎ ವಕೀಲರಿಂದಃ**

ನನ್ನ ಮತ್ತು ಎದುರುದಾರನ ಮದುವೆ ದಿಃ 24-04-2015 ರಂದು ಚಳಗೇರಿ ಗ್ರಾಮದ ಶ್ರೀ ತುಳಜಾಭವಾನಿ ದೇವಾಸ್ಥನದಲ್ಲಿ ನಮ್ಮ ಧರ್ಮದ ಸಂಪ್ರದಾಯದ ಪ್ರಕಾರ ಗುರು-ಹಿರಿಯರ ಸಮಕ್ಷಮ ನೆರವೇರಿರುತ್ತದೆ. ದಿಃ 26-05-2015 ರಂದು ನಮ್ಮ ವಿವಾಹ ರಾಣೇಬೆನ್ನೂರಿನ ನೊಂದಣಿ ಕಚೇರಿಯಲ್ಲಿ ನೊಂದಣಿ ಸಂಖ್ಯೆ . 06/2015 ರಲ್ಲಿ ನೊಂದಣಿ ಆಗಿರುತ್ತದೆ . ವಿವಾಹದ ನಂತರ ನಾನು ಮತ್ತು ಎದುರುದಾರ ಎದುರುದಾರನ ಚಳಗೇರಿ ಗ್ರಾಮದ ಮನೆಯಲ್ಲಿ 6 ತಿಂಗಳವರೆಗೆ ಅನ್ಯೂನ್ಯವಾಗಿ ಸಂಸಾರ ಮಾಡಿದ್ದೇವೆ. ಎದುರುದಾರ

ಪೆಂಟಿಂಗ್ ಕೆಲಸ ಮಾಡುತ್ತಾರೆ . ಸದರಿ 6 ಅವಧಿಯಲ್ಲಿ ಎದುರುದಾರನ ಮನೆಯಲ್ಲಿ ವಾಸವಾಗಿದ್ದಾಗ ಎದುರುದಾರನ ತಾಯಿ ಹಾಗು ಎದುರುದಾರನ ತಮ್ಮ ಹಾಗು ಎದುರುದಾರನ ಅಣ್ಣನ ಇಬ್ಬರು ಮಕ್ಕಳು ನನಗೆ ತುಂಬಾ ಕಿರುಕುಳ ನೀಡುತ್ತಿದ್ದರು ಆ ಕಾರಣಕ್ಕಾಗಿ ನಾನು ಮತ್ತು ಎದುರುದಾರ ಹರಿಹರ ತಾಲ್ಲೂಕಿನ ಹಲಸಬಾಳು ಗ್ರಾಮದಲ್ಲಿ ವಾಸವಾಗಿದ್ದೇವು . ಎದುರುದಾರ ಪೆಂಟಿಂಗ್ ಕೆಲಸ ಮಾಡುವ ಸಲುವಾಗಿ ಬೇರೆ ಊರಿಗೆ ಹೋಗುತ್ತಿದ್ದರು, ನಾನು ಗಾರ್ಮೆಂಟ್ಸನಲ್ಲಿ ಕೆಲಸ ಮಾಡುತ್ತಿದ್ದೆ ಆ ಕಾರಣಕ್ಕಾಗಿ ನಾವು ಪುನಃ ಹರಿಹರಕ್ಕೆ ಬಂದು ಆಂಜನೇಯ ಬಡಾವಣೆಯಲ್ಲಿ ವಾಸವಾಗಿರಲು ಫ್ರಾರಂಭಿಸಿದೇವು . ಎದುರುದಾರ ಕುಡಿದುಕೊಂಡು ಬಂದು ಜಗಳ ಮಾಡುತ್ತಿದ್ದ ನಿನ್ನಿಂದ ನನ್ನ ಜೀವನ ಹಾಳಾಯಿತು ಎಂದು ಬೈಯುತ್ತಿದ್ದ ಮತ್ತು ಮನೆ ಬಿಟ್ಟು ಹೋಗುತ್ತಿದ್ದ . ದಿಃ 30-12-2021 ರಂದು ನಾನು ಹರಿಹರದ ಪೋಲಿಸ್ ಠಾಣೆಯಲ್ಲಿ ಎದುರುದಾರನ ವಿರುದ್ಧ ದೂರನ್ನು ನೀಡಿದ್ದೆ . ದೂರನ್ನು ದಾಖಲಿಸಿದ ನಂತರ ಎದುರುದಾರ ಪೋಲಿಸ್ ಠಾಣೆಗೆ ಬಂದು ನನ್ನನ್ನು ಚೆನ್ನಾಗಿ

ನೋಡಿಕೊಳ್ಳುತ್ತೇನೆ ಎಂದು ಹೇಳಿ ಪುನಃ ಹರಿಹರಕ್ಕೆ ನಾವು ಮರಳಿ ಬಂದಿದ್ದೇವೆ . ಪೋಲಿಸ್ ಸ್ಟೇಶನ್ ನಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತೇನೆ ಎಂದು ಹೇಳಿ ನನ್ನನ್ನು ಕರೆದು ಕೊಂಡು ಬಂದ ನಂತರ ಒಂದೇ ರಾತ್ರಿ ಇದ್ದು ನನ್ನನ್ನು ಬಿಟ್ಟು ತನ್ನ ತಾಯಿಯ ಮನೆಗೆ ಎದುರುದಾರ ಹೋಗಿದ್ದಾನೆ . ಹದಿನೈದು ದಿನಗಳ ನಂತರ ಬಂದು ಚಳಗೇರಿಗೆ ನನ್ನನ್ನು , ನನ್ನ ಇಬ್ಬರು ಮಕ್ಕಳನ್ನು ಮತ್ತು ಸಾಮಾನುಗಳನ್ನು ತೆಗೆದು ಕೊಂಡು ಚಳಗೇರಿಗೆ ಕರೆದು ಕೊಂಡು ಬಂದಿದ್ದಾನೆ . ಚಳಗೇರಿಗೆ ಬಂದ ನಂತರ ಬೆಳಿಗ್ಗೆ 8.00 ಗಂಟೆಗೆ ಹೋದರೆ ರಾತ್ರಿ 1.00 ಅಥವಾ 2.00 ಗಂಟೆಗೆ ಎದುರುದಾರ ಬರುತ್ತಿದ್ದ ಜಗಳ ಮಾಡಿ ಪುನಃ ಹೋಗುತ್ತಿದ್ದ ಮತ್ತು ಮನೆಗೆ ಯಾವುದೇ ದಿನಸಿ-ಧಾನ್ಯಗಳನ್ನು ತಂದು ಕೊಡುತ್ತಿರಲಿಲ್ಲ. ನನ್ನ ತಂದೆ-ತಾಯಿ ದಿನಸಿ-ಧಾನ್ಯಗಳನ್ನು ತಂದು ಕೊಡುತ್ತಿದ್ದರು ಆಗಲೂ ಸಹ ಎದುರುದಾರ ನಿನ್ನ ತಂದೆ-ತಾಯಿ ತಂದು ಕೊಡುತ್ತಿದ್ದಾರೆ ಅದನ್ನೆ ತಿಂದು ಕೊಂಡು ಇರು ಎಂದು ಪುನಃ ಜಗಳ ಮಾಡುತ್ತಿದ್ದ . ದಿಃ 31-01-2022 ರಂದು ಹಾವೇರಿಯ ಮಹಿಳಾ ಪೋಲಿಸ್ ಠಾಣೆಯಲ್ಲಿ ನಾನು ದೂರನ್ನು

ದಾಖಲಿಸಿದ್ದೆ . ದೂರನ್ನು ದಾಖಲಿಸಿದ 2 ದಿನಗಳ ನಂತರ ಎದುರುದಾರ ಮತ್ತು ಆತನ ತಂದೆ–ತಾಯಿ ಪೋಲಿಸ್ ಸ್ಟೇಶನ್ ಗೆ ಬಂದು ನನ್ನನ್ನು ಮತ್ತು ನನ್ನ ಎರಡು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿದ ಮತ್ತು ಅತನ ತಂದೆ–ತಾಯಿಯೂ ಸಹ ಪ್ರತಿ 3 ದಿನಕ್ಕೊಮ್ಮೆ ಬಂದು ನಿಮ್ಮನ್ನು ವಿಚಾರಿಸುತ್ತೇವೆ ಎಂದು ಹೇಳಿದ್ದರು . ಎದುರುದಾರ ನನ್ನನ್ನು ಚಳಗೇರಿಗೆ ನಮ್ಮ ಬಾಡಿಗೆಯ ಮನೆಗೆ ಕರೆದು ಕೊಂಡು ಬಂದ ನಂತರ ನೀನು ಹಾವೇರಿಯವರೆಗೆ ಹೋಗಿದ್ದೆ , ಯಾರ ಜೊತೆ ಹೋಗಿದ್ದೆ ಎಂದು ಪುನಃ ನನ್ನನ್ನು ಬಿಟ್ಟು ಹೋದರು ಅದಕ್ಕೆ ನಾನು ಪುನಃ ಹಾವೇರಿಯ ಮಹಿಳಾ ಪೋಲಿಸ್ ಠಾಣೆಗೆ ಹೋಗಿ ವಿಷಯವನ್ನು ತಿಳಿಸಿದೆ ಮತ್ತು ನಾನು ಪುನಃ ಚಳಗೇರಿಗೆ ಹೋಗುವುದಿಲ್ಲ ಎಂದು ಹೇಳಿದಾಗ ಪೋಲಿಸರು ನನ್ನನ್ನು ಮತ್ತು ನನ್ನ ಎರಡೂ ಮಕ್ಕಳನ್ನು ಹಾವೇರಿಯ ಧ್ವನಿ ಸ್ವಾಧಾರ ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದ್ದಾರೆ . ಹಾವೇರಿಯ ಧ್ವನಿ ಸ್ವಾಧಾರ ಕೇಂದ್ರದಲ್ಲಿ ನಾವು 2 ತಿಂಗಳದವರೆಗೆ ವಾಸವಾಗಿದ್ದೇವು . ಹಾವೇರಿಯ ಧ್ವನಿ ಸ್ವಾಧಾರ ಕೇಂದ್ರದವರು ಎದುರುದಾರನಿಗೆ ಸಂಧಾನಕ್ಕೊಸ್ಕರ ಕರೆದರೂ ಸಹ

ಎದುರುದಾರ ಸದರಿ ಕೇಂದ್ರಕ್ಕೆ ಬರಲಿಲ್ಲ ಆಕೆ ಹೇಗೆ ಹೋಗಿದ್ದಾಳೆ ಹಾಗೆಯೇ ಬರಲಿ ಎಂದು ಹೇಳುತ್ತಾ ಎರಡು ತಿಂಗಳವರೆಗೆ ಮುಂದೂಡಿರುತ್ತಾರೆ. ಸದರಿ ಎರಡು ತಿಂಗಳ ನಂತರ ಸ್ವಾಧಾರ ಕೇಂದ್ರದವರು ಚಳಗೇರಿಯ ಪೊಲಿಸರಿಗೆ ಸದರಿ ವಿಷಯವನ್ನು ತಿಳಿಸಿದ ಎರಡು ದಿನಗಳ ನಂತರ ಚಳಗೇರಿಯ ಪೋಲಿಸರು ಎದುರುದಾರನನ್ನು ಹಾವೇರಿಯ ಸ್ವಾಧಾರ ಕೇಂದ್ರಕ್ಕೆ ಕರೆದು ಕೊಂಡು ಬಂದಿದ್ದಾರೆ . ಸದರಿ ಸ್ವಾಧಾರ ಕೇಂದ್ರದವರು ಬುದ್ಧಿವಾದ ಹೇಳಿದ ನಂತರ ಎದುರುದಾರ ನಮ್ಮನ್ನು ಚಳಗೇರಿಯ ಬಾಡಿಗೆಯ ಮನೆಗೆ ಕರೆದು ಕೊಂಡು ಬಂದಿರುತ್ತಾನೆ . ಬಾಡಿಗೆಯ ಮನೆಗೆ ಕರೆದು ಕೊಂಡು ಬಂದ ನಂತರವೂ ಸಹ ಎದುರುದಾರ ಹೇಂಗೆ ಬೇಕಾದಂಗೆ ಹೊಡೆಯುತ್ತಿದ್ದ ಬೈಯುತ್ತಿದ್ದ ನಮ್ಮ ಯೋಗ-ಕ್ಷೇಮವನ್ನು ವಿಚಾರಿಸುತ್ತಿರಲಿಲ್ಲ .

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ. ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.